# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.313-2021** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ರವಿಕುಮಾರ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 28-03-2025.** |

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಆರ್.ಎಸ್.ಕೆ ವಕೀಲರಿಂದಃ**

ನಾನು ಪತ್ರ ಬರಹಗಾರರಾದ ನಾಗರಾಜೇ ಅರಸ್ ರವರ ಬಳಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ನಾನು ಪತ್ರಬರಹಾರರ ಬಳಿ ಕೆಲಸ ಮಾಡುತ್ತಿದ್ದುದ್ದರಿಂದ ಡಾಕ್ಯೂಮೆಂಟೇಷನ್ ಗೆ ಸಂಬಂಧಿಸಿದಂತೆ ಎಲ್ಲಾ ವ್ಯವಹಾರಗಳು ತಿಳಿದಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಯಾವುದಾದರೂ ಪತ್ರಕ್ಕೆ ಸಹಿ ಮಾಡುವ ಸಮಯ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ.

2. ನನ್ನ ಬಳಿ ಜೇ.ಸಿ.ಬಿ ಇತ್ತು ಎಂದರೆ ಸರಿಯಲ್ಲ. ನಾನು ಈಗ ಜೈ ಕರ್ನಾಟಕ ಸಂಘದ ತಾಲ್ಲೂಕಿನ ಅಧ್ಯಕ್ಷನಾಗಿರುತ್ತೇನೆ ಎಂದರೆ ಸರಿ. ಕಲ್ಲಹಳ್ಳಿಯಲ್ಲಿ ನನ್ನ ಹೆಸರಿನಲ್ಲಿ 2 ನಿವೇಶನಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರ ಬಳಿ ಕೆಲಸ ಮಾಡುತ್ತಿದ್ದೆನು ಎಂದು ತೋರಿಸಲು ಯಾವುದೇ

ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳುವಂತೆ ಪಿರ್ಯಾದಿದಾರರ ಬಳಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಕೇವಲ ಅನ್ಯೋನ್ಯವಾಗಿ ಇದ್ದೆನು ಎಂದರೆ ಸರಿಯಲ್ಲ. ನಿಡಿ-1 ಅನ್ನು ನಾಗರಾಜೇ ಅರಸ್ ರವರು ಬರೆದಿರುತ್ತಾರೆ ಎಂದರೆ ಸರಿ. ನಾನು ನಾಗರಾಜೇ ಅರಸ್ ರವರ ಬಳಿ ಕೆಲಸ ಮಾಡುತ್ತಿದ್ದುದ್ದರಿಂದ ಅವರ ಕೋರಿಕೆ ಮೇರೆಗೆ ನಿಡಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಸ್ವತ್ತನ್ನು ಕೊಡಿಸಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬೇರೆ ವ್ಯಕ್ತಿಗಳಿಗೆ ಸ್ವತ್ತುಗಳನ್ನು ಕೊಡಿಸುವ ವ್ಯವಹಾರವನ್ನು ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ನಿಡಿ-1 ಅನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಪಿರ್ಯಾದಿದಾರರು ಮತ್ತು ಅವರ ಪತ್ನಿಯವರ ಹೆಸರಿನಲ್ಲಿ ಇರುತ್ತದೆ ಎಂದು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

3. ನನ್ನ ಚೆಕ್ ಮತ್ತು ಬಾಂಡ್ ಪೇಪರ್ ಪಿರ್ಯಾದಿದಾರರ ಬಳಿ ಇದ್ದು, ಅವುಗಳನ್ನು ವಾಪಸ್ಸು ಕೊಡಿಸಿಕೊಡುವಂತೆ ಕೋರಿ ನಾನು ಯಾವುದೇ ದೂರು ನೀಡಿರುವುದಿಲ್ಲ. ನಾನು ಪಿರ್ಯಾದಿದಾರರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಹೇಳುವಂತೆ

ಪಿರ್ಯಾದಿದಾರರಿಗೆ 7 ಚೆಕ್ಕುಗಳನ್ನು ನೀಡಿಲ್ಲವಾದ್ದರಿಂದ ನಾನು ಅವರ ವಿರುದ್ಧ ಯಾವುದೇ ದೂರನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ಪಿರ್ಯಾದಿದಾರರು ನನಗೆ ಪೂರ್ಣ ಹಣವನ್ನು ಚೆಕ್ ಮುಖೇನವೇ ನೀಡಿರುತ್ತಾರೆ ಎಂದರೆ ಸರಿ. ನಾನು ಚೀಟಿ ವ್ಯವಹಾರವನ್ನು ಸಹ ನಡೆಸುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರವನ್ನು ನಡೆಸುತ್ತಿದ್ದು, ಸದರಿ ಹಣವನ್ನು ಚೀಟಿದಾರರಿಗೆ ನೀಡದೇ ಇದ್ದ ಕಾರಣ ಅವರು ನನ್ನನ್ನು ಒತ್ತಾಯಿಸುತ್ತಿದ್ದುದ್ದರಿಂದ ನಾನು ಒಮ್ಮೆ ಆತ್ಮಹತ್ಯೆಗೂ ಸಹ ಪ್ರಯತ್ನಿಸಿದ್ದೆನು ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರ ನಡೆಸುತ್ತಿದ್ದುದ್ದರಿಂದ ನಾನು ಬೇರೆಯವರ ಬಳಿ ಸಾಲವನ್ನು ಪಡೆದುಕೊಳ್ಳುತ್ತಿದ್ದೆನು ಎಂದರೆ ಸರಿಯಲ್ಲ. ಆ ರೀತಿ ಸಾಲ ಪಡೆದುಕೊಳ್ಳುವಾಗ ಬೇರೆಯವರಿಗೂ ಸಹ ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರಿಂದ 4 ರವರೆಗಿನ ದಾಖಲೆಗಳು ಈ ಪ್ರಕಣಕ್ಕೆ ಸಂಬಂಧಿಸಿದ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರ ಬಳಿ ಇರುವ ಚೆಕ್ಕನ್ನು ವಾಪಸ್ಸು ಕೊಡಿಸಿಕೊಡುವಂತೆ ನಾನು ಪಿರ್ಯಾದಿದಾರರ ವಿರುದ್ಧ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾನು ಪಿರ್ಯಾದಿದಾರರಿಗೆ ನೀಡಿರುವ ಚೆಕ್ಕು ಅಮಾನ್ಯಗೊಂಡಿರುವುದರಿಂದ ನಾನು ಹಣವನ್ನು ಮರುಪಾವತಿ

ಮಾಡಬೇಕಾಗುತ್ತದೆ ಹಾಗೂ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**